ಶ್ರೀ ಎಸ್. ಆರ್. ರಾಮಯ್ಯ.—(c)ಗೆ ಉತ್ತರವಾಗಿ ಒಂದು ಪೌಂಡಿಗೆ 16 ನಯಾ. ಪೈಸೆಯಿಂದು 32 ನಯಾ ಪೈಸವರೆಗೆ ಆಗುತ್ತದೆ ಎಂದು ಹೇಳಿದ್ದೀರಿ, ಖಾಸಗಿ ರೇರಿಂಗ್ ಸೆಂಟರ್‌ನಲ್ಲಿ ತಯಾರಾಗುವುದಕ್ಕೆ ಒಂದು ಪೌಂಡಿಗೆ ಎಷ್ಟು ಕೊಡುತ್ತೀರಿ ?

Sri H. C. LINGA REDDY.—That constitutes a different question.

ಶ್ರೀ ಎಸ್. ಆರ್. ರಾಮಯ್ಯ.—ಒಂದು ಪೌಂಡಿಗೆ 6 ನಯಾ ಪೈಸೆ ಕೊಡುತ್ತಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ. ಎಚ್. ಸಿ. ಲಿಂಗಾರೆಡ್ಡಿ.—ಅದು ಬೇರೆ ಪ್ರಶ್ನೆ.

ಶ್ರೀ ಎಸ್. ಆರ್. ರಾಮಯ್ಯ.—ತಮ್ಮ ಲೆಕ್ಕದಂತೆ 16 ನಯಾ ಪೈಸೆ ಆಗಿದೆ. 6 ನಯಾ ಪೈಸಾ, ಕೊಟ್ಟಿದ್ದರಿಂದ ಇನ್ನು ಕೊಡಬೇಕಾದ 10 ನಯಾ ಪೈಸೇ ಅನ್ನು ಜಾಸ್ತಿ ಕೊಡುತ್ತಿರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದನ್ನು ತನಿಖೆ ಮಾಡುತ್ತೇನೆ.

Sri C. K. RAJAIAH SHETTY.—What is the average yield per acre ?

Sri H. C. LINGA REDDY.—300 lbs. per acre.

ಶ್ರೀ ಜೆ. ವೆಂಕಟಪ್ಪ.—ರೇಷ್ಮೆ ಇಲಾಖೆಯ ಮುಖಾಂತರ 398 ಲಕ್ಷ ಬಿಳಿ ಗೂಡಿನಲ್ಲಿ ಎಷ್ಟು ಗೂಡುಗಳನ್ನು ಬೇಸಿಕ್‌ಸೀಡ್ ಪ್ರಿಪರೇಷನ್‌ಗೆ ವರ್ಷೇವರ್ಷೇ ಉಪಯೋಗ ಮಾಡುತ್ತಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—15 ಲಕ್ಷ ಲೇಯಿಂಗ್ಸ್ ನಾವು ತಯಾರುಮಾಡುತ್ತೇವೆ.

TENANCY CASES PENDING IN KUNIGAL TALUK.

*Q.—586. Sri N. HUTCHMASTY GOWDA (Chandrasekharapura).—

Will the Government be pleased to state :—

(*a*) the number of tenancy cases launched from the date of enforcement of Tenancy Act up to date in Kunigal Taluk ;

(*b*) the number of cases pending as on 1st January 1961 ?

A.—Sri KADIDAL MANJAPPA (Minister for Revenue).—

(*a*) 308.

(*b*) 35.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1961ನೇ ಇಸವಿ ಜನವರಿ ಒಂದನೇ ತಾರೀಖಿನಲ್ಲಿ 35 ಕೇಸುಗಳು ಮಾತ್ರ ಉಳಿದಿವೆ ಎಂದು ಹೇಳಿದ್ದೀರಿ. ಹಾಗಾದರೆ ಉಳಿದ ಕೇಸುಗಳು ಡಿಸ್ ಪೋಸ್ ಆಗಿವೆಯೇ ಅಥವಾ ಅಪೀಲು ಕೇಸುಗಳು ಆಗಿದೆಯೇ ?

†ಶ್ರೀ ಕಡಿದಾಳ್ ಮಂಜಪ್ಪ.—ಅಪೀಲು ಕೇಸಿನಲ್ಲಿ ಇದ್ದದ್ದು ಮೆನ್‌ಷನ್ ಮಾಡಿದ್ದೇವೆ. 12 ಅಪೀಲನಲ್ಲಿದೆ. ಇನ್ನೊಂದು ಕೇನು ಡಿಸ್ಟ್ರಿಕ್ಟ್ ಆಫೀಸಿನಲ್ಲಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತ್ತೀಚೆಗೆ ಕುಣಿಗರ್ ತಾಲ್ಲೂಕಿನಲ್ಲಿ ನಡೆದಂತ ಟೆನೆನ್ಸಿ ಕೇಸಿನಲ್ಲಿ ಸಬ್ ಡಿವಿಜನ್ ಆಫೀಸರಿಗಾಗಲೀ, ತಹಶೀಲ್ದಾರರಿಗಾಗಲಿ ವಿಚಾರ ಮಾಡುವುದಕ್ಕೆ ಅರ್ಹತೆ ಇಲ್ಲ. ಸಿವಿಲ್ ಕೋರ್ಟಿಗೆ ಅರ್ಹತೆ ಇದೆ ಎಂದು ಡಿಸ್‌ಪ್ಯೂಟ್ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಒಂದು ಸಾರಿ ಇದನ್ನು ಗಮನಕ್ಕೆ ತಂದಿದ್ದರು. ಅದು ಜುಡಿಷಿಯರ್ ಮ್ಯಾಟರ್. ಪ್ರಾಸಂಗಿಕವಾಗಿ ನಾನು ಕೇಳಿದ್ದಕ್ಕೆ ಅದನ್ನು ಕಾನೂನು ಪ್ರಕಾರ ತೀರ್ಮಾನ ಮಾಡಿದ್ದೇವೆ ಎಂದು ಅಸಿಸ್ಟೆಂಟ್ ಕಮೀಷನರ್ ಹೇಳಿದರು.

ಶ್ರೀ ಎನ್. ಹುಚ್ಚಮಾಸ್ತಿಗಾಡ.—ತಹಶೀಲ್ದಾರರು ಅದನ್ನು ವಿಚಾರಣೆ ಮಾಡುವುದಕ್ಕೆ ಅರ್ಹತೆ ಇಲ್ಲವೆಂದು ಸಬ್ ಡಿವಿಜನ್ ಆಫೀಸರು ತೀರ್ಮಾನ ಮಾಡಿದ್ದಾರೆ. ಸಿವಿಲ್ ಕೋರ್ಟ್ ನವರು ನಮಗೆ ಜೂರಿಸ್‌ಡಿಕ್ಷನ್ ಇಲ್ಲ, ತಹಶೀಲ್ದಾರರು ಮಾಡಬೇಕೆಂದು ಹೇಳಿದ್ದಾರೆ. ಈ ಮಧ್ಯೆ ಚೆನೆನ್ಸಿ ಕೇಸುಗಳ ಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಚೆನೆನ್ಸಿ ಆಕ್ಟ್ ಪ್ರಕಾರ ಅದು ಕ್ಯಾಸಿ ಜುಡಿಷಿಯರ್ ಮ್ಯಾಟರ್ ಆಗಿರುವುದರಿಂದ ನಮಗೆ ಅಪೀಲ್ ಪವರ್ಸ್ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗಾಡ.—ಅದಕ್ಕೆ ಈ ರೀತಿ ಇಕ್ಕಟ್ಟಿನ ಪರಿಸ್ಥಿತಿ ಇರುವುದರಿಂದ ನೂಕ್ತವಾದ ತಿದ್ದುಪಡಿ ಕಾನೂನು ತರುವುದು ಅವಶ್ಯಕವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.— 1957-58ನೇ ಇಸವಿಯಲ್ಲಿ ಅಪರೇಟ್ ಟ್ರಿಬ್ಯುನಲ್ ಆಕ್ಟ್ ಮಾನ್ಯ ಸಭೆಯಲ್ಲಿ ತೀರ್ಮಾನವಾಗಿದೆ. ಪುನಃ ಸರ್ಕಾರಕ್ಕೆ ರಿವಿಜನಲ್ ಪವರ್ಸ್ ಇಟ್ಟುಕೊಳ್ಳುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—35 ಕೇಸುಗಳು ಎಷ್ಟು ದಿವಸಗಳಿಂದ ಹಾಗೆಯೇ ಉಳಿದಿವೆ ?

ಶ್ರೀ ಕಡಿದಾಳ್ ಮಂಜಪ್ಪ.—1957-58ನೇ ಇಸವಿಯ ಕೇಸು 1, 1958-59ನೇ ಇಸವಿಯ ಕೇಸು 2, 1959-60ನೇ ಇಸವಿಯಲ್ಲಿ ತಾಲ್ಲೂಕು ಆಫೀಸಿನಲ್ಲಿ 4 ಕೇಸುಗಳು ಇದೆ. ಅಸಿಸ್ಟೆಂಟ್ ಕಮೀಷನರ ಆಫೀಸಿನಲ್ಲಿ 12 ಕೇಸುಗಳು. 1960- 61ನೇ ಸಾಲಿನಲ್ಲಿ ತಾಲ್ಲೂಕು ಆಫೀಸಿದಲ್ಲಿ 15 ಕೇಸುಗಳು. ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಒಂದು ಕೇಸು ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಣಿಗರ್ ತಾಲ್ಲೂಕಿಗೆ 1957ರಿಂದ ಇದುವರೆಗೆ ಎಷ್ಟು ತಹಶೀಲ್ದಾರರನ್ನು ಕಳುಹಿಸಿದಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ನೆನಪಿಲ್ಲ.

Sri C. J. MUCKANNAPPA.—Is it not a fact that due to frequent changes of the Tahsildar, pendency was greater ?

Sri KADIDAL MANJAPPA.—I do not subscribe to that view.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಉಳಿದಿರತಕ್ಕ ಕೇಸುಗಳನೆಲ್ಲಾ ವಿಚಾರಣೆ ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ತಹಶೀಲ್ದಾರರ ವ್ಯಾಪ್ತಿಗೆ ಒಳಪಟ್ಟಿದ್ದರೆ ತಹಶೀಲ್ದಾರರೇ ತೀರ್ಮಾನ ಮಾಡುತ್ತಾರೆ. ಅಪೀಲು ಹೋದರೆ ಅಸಿಸೆಂಟ್ ಕಮೀಷನರ್ ತೀರ್ಮಾನ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಚಾರಣೆ ಮಾಡುವುದಕ್ಕೆ ತಹಶೀಲ್ದಾರರಿಗೆ ಹಕ್ಕು ಇಲ್ಲ ಎಂದು ಮೇಲಿನ ಕೋರ್ಟಿನವರು ತೀರ್ಮಾನ ಮಾಡಿರುವಾಗ, ಮೇಲ್ಪಟ್ಟ ಕೇಸುಗಳನ್ನು ವಿಚಾರಣೆ ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಆರ್ಡರ್ ಮಾಡಿದ್ದೇವೆ ಎಂದು ಹೇಳಿದರು. ಅದನ್ನು ವಿಚಾರಿಸುತ್ತೇನೆ.

Sri M. RAMAPPA.—When the Civil Court has been given a verdict, does it not prevail as against the verdict of the Revenue Court ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡಬೇಕು.

ಶ್ರೀ ಜಿ. ವೆಂಕಟೇಗೌಡ.—ಈಗ ಮೂರು ವರ್ಷಗಳಿಂದ ಎಂಟು ಜನರನ್ನು ಹಾಕಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ನೆನಪಿಲ್ಲ.

POST OF MEDICAL OFFICER FALLEN VACANT IN BANAVASI LOCAL FUND DISPENSARY.

*Q.—644. Sri RAMAKRISHNA HEGDE (Sirsi).—

Will the Government be pleased to state :—

since how many months the vacancy caused by the transfer of the Medical Officer of Banavasi (North Kanara) Hospital has been kept unfilled ?

A.—Dr. K. K. HEGDE (Minister for Health).—

The post of Medical Officer, Banavasi L.F. Dispensary became vacant from 22nd April 1960. A Medical Officer has since been posted to the Dispensary by the Director of Public Health.

Smt. V. V. MIRJANKAR.—When was the medical officer posted ?

†Sri K. K. HEGDE.—On 30th March 1961.

Smt. V. V. MIRJANKAR.—What was the reason for the delay in posting ?

Dr. K. K. HEGDE.—Everybody knows that it is due to lack of medical personnel.

ಶ್ರೀಮತಿ ನಾಗರತ್ನಮ್ಮ.—ಅಲ್ಲಿನ ಜನರಿಂದ ಮತ್ತು ಎಂ.ಎಲ್.ಎ. ಗಳಿಂದ ಮನವಿಗಳು ಬಂದಿರಲಿಲ್ಲವೇ ?

ಡಾ. ಕೆ. ಕೆ. ಹೆಗ್ಗಡೆ.—ಮನವಿಗಳು ಬಂದಿರುವುದರಿಂದ ಡಿಪಾರ್ಟ್‌ಮೆಂಟಿಗೆ ಹೇಳಿಕಳುಹಿಸಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀಮತಿ ನಾಗರತ್ನಮ್ಮ.—ಮನವಿಗಳು ಬಂದನಂತರ ಕ್ರಮ ತೆಗೆದುಕೊಳ್ಳುತ್ತಿರಾ ?

ಡಾ. ಕೆ. ಕೆ. ಹೆಗ್ಗಡೆ.—ಮನವಿಗಳು ಬಂದರೂ ಮಾಡುತ್ತೇವೆ. ಮನವಿಗಳು ಬಾರದೆ ಇದ್ದರೂ ಮಾಡುತ್ತೇವೆ.

SHORT NOTICE QUESTION AND ANSWERS

FIRE ACCIDENT IN TAVANANDI VILLAGE.

Q.—13. Sri D. MOOKAPPA (Sagar).—

Will the Government be pleased to state :—

(*a*) whether they are aware that fire accident has occurred in Tavanandi village, Sorab Taluk, on 14th March 1961 ;

(*b*) if so, what is the total loss incurred ;